ನಿರ್ದೇಶಕರ ಕಛೇರಿ, ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ನಿರ್ದೇಶನಾಲಯ,
ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-೪

ಸಂಖ್ಯೆ:೯ಟಸಿ೩/ತರಬೇತಿ/೨೦೦೧-೦೨. ದಿ:೧೯-೧೧-೨೦೦೨.

## ಜ್ಞಾಪನ

ವಿಷಯ: ಬೇಸಿಗೆ ರಜಾ ಅವಧಿಯಲ್ಲಿ ಸೇವಾ ನಿರತ ತರಬೇತಿ ಪಡೆದ ಶಿಕ್ಷಕರಿಗೆ ಗಳಿಕೆ ರಜೆ ಜಮ ನೀಡುವ ಬಗ್ಗೆ.

ಉಲ್ಲೇಖ: ೧) ಸರ್ಕಾರದ ಆದೇಶ ಸಂಖ್ಯೆ:ಸಾ.ಶಿ.ಇ.ಬೆಂಗಳೂರು-ರವರ ಜ್ಞಾಪನ ಸಂಖ್ಯೆ:ಪ್ರಾ.ಶಿ/ಸ.ಶಿ.ಅ/ರಜೆ.ತರಬೇತಿ-೧/೦೧-೦೨ ದಿ:೨೭/೩/೦೨.

-0-

೨೦೦೨-೦೩ ನೇ ಸಾಲಿನಲ್ಲಿ ಹಾಗೂ ಮುಂದಿನ ವರ್ಷಗಳಲ್ಲಿ ಬೇಸಿಗೆ ರಜಾ ಅವಧಿಯಲ್ಲಿ ವಿವಿಧ ಸೇವಾನಿರತ ತರಬೇತಿಗಳಿಗೆ ನಿಯೋಜಿಸಲ್ಪಟ್ಟ/ನಿಯೋಜಿಸಲಾಗುವ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರಿಗಳಿಗೆ ಕೆ.ಸಿ.ಎಸ್ ನಿಯಮ ೧೧೩(೩)(ಎ) ರನ್ವಯ ಗಳಿಕೆ ರಜೆ ಜಮ ನೀಡುವುದು.

ಕೆ.ಸಿ.ಎಸ್ ನಿಯಮ ೧೧೩ ಉಪನಿಯಮ ೩(ಎ)ರ ಪ್ರಕಾರ ಸರ್ಕಾರಿ ನೌಕರನು ಯಾವುದೇ ವರ್ಷದಲ್ಲಿ ಬಿಡುವನ್ನು ಭಾಗಶ: ಬಳಸಿಕೊಂಡ ಪಕ್ಷದಲ್ಲಿ ಆ ವರ್ಷದ ಬಿಡುವಿನಲ್ಲಿ ಸದರಿ ನೌಕರನು ಬಳಸಿಕೊಳ್ಳದೇ ಇರುವ ಬಿಡುವಿನ ದಿವಸಗಳಷ್ಟಕ್ಕೆ, ೩೦ ದಿವಸಗಳ ಅಂಥ ಅನುಪಾತದಲ್ಲಿ ಗಳಿಕೆ ರಜೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ಆದರೆ, ಖಾಯಂ ಸೇವೆಯಲ್ಲಿ ಅಥವಾ ಅರೆ ಖಾಯಂ ಸೇವೆಯಲ್ಲಿಲ್ಲದಿರುವ ಸರ್ಕಾರಿ ನೌಕರನಿಗೆ ಸೇವೆಯ ಮೊದಲನೇ ವರ್ಷಕ್ಕೆ ಸಂಬಂಧಿಸಿದಂತೆ ಅಂತಹ ರಜೆಯನ್ನು ಅನುಮತಿಸತಕ್ಕದ್ದಲ್ಲ.

ಉಲ್ಲೇಖಿತ(೧) ರ ಆದೇಶದನ್ವಯ ಸೇವಾ ನಿರತ ತರಬೇತಿಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ ಗಳಿಕೆ ರಜೆಯನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡುವುದು.

$$\frac{\text{ಸೇವಾ ನಿರತ ತರಬೇತಿ ಪಡೆದ ಅವಧಿ}}{\text{ವರ್ಷದಲ್ಲಿ ಒಟ್ಟು ರಜಾ ಅವಧಿ}} \times ೩೦$$

ಕರಡು ಪ್ರತಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರ ಪರವಾಗಿ
( ಸಂ ಮತ್ತು ತ)

ಪ್ರತಿ:- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

೧) ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಡಯಟ್ ಪ್ರಾಂಶುಪಾಲರುಗಳಿಗೆ.

೨) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶರು(ಆಡಳಿತ).

೩) ಪ್ರಾಂಶುಪಾಲರು, ಮುರಾರ್ಜಿದೇಸಾಯಿ ವಸತಿ ಶಾಲೆ, ರಾಮನಗರಂ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

kpeta.weebly.com

Scanned by CamScanner